ವಿಭಾಗಿಸಲಾಗಿದ್ದು, ಎಲ್ಲಾ ೧೧ ಕೆ.ವಿ. ಫೀಡರುಗಳ ಮೇಲಿನ ಲೋಡನ್ನು ಕಡಿಮೆಗೊಳಿಸಿರುವುದರಿಂದ ಓವರ್ ಲೋಡ್‌ನಿಂದಾಗಿ ಆಗುತ್ತಿದ್ದ ವಿದ್ಯುತ್ ಅಡಚಣೆಯೂ ಕಡಿಮೆಯಾಗಿದೆ.

ರಾಜ್ಯಾದ್ಯಂತ ಸೆಪ್ಟಂಬರ್ ೯೨ ರಿಂದ ಜಾರಿಯಲ್ಲಿರುವ ದಿನವಹಿ ೬ ಗಂಟೆಗಳ ನಿಯಮಿತ ಲೋಡ್ ಶೆಡ್ಡಿಂಗ್ ಮಂಡಳಿಯ ಗಂಗಾವತಿ ವಿಭಾಗದಲ್ಲೂ ಜಾರಿಯಲ್ಲಿದೆ. ಸಧ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವೂ ಆಗಿದೆ.

ಕನಕಗಿರಿ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸುಧಾರಿಸಲು, ಕನಕಗಿರಿಯಲ್ಲಿ ಒಂದು ೩೩/೧೧ ಕೆ.ವಿ.ಉಪ ವಿದ್ಯುತ್ ಕೇಂದ್ರವನ್ನು ಮಂಡಳಿಯು ನಿರ್ಮಾಣ ಮಾಡುತ್ತಿದೆ. ಇದಕ್ಕಾಗಿ ಗಂಗಾವತಿಯಿಂದ ಕನಕಗಿರಿಗೆ ಸುಮಾರು೨೦ ಕಿ.ಮಿ.ಉದ್ದದ ೩೩ ಕೆ.ವಿ.ವಿದ್ಯುತ್ ಲೈನನ್ನು ನಿರ್ಮಾಣ ಮಾಡಲಾಗುತ್ತಿದೆ. ಈ ಉದ್ದೇಶಿತ೩೩/೧೧ ಕೆ.ವಿ.ಉಪ ವಿದ್ಯುತ್ ಕೇಂದ್ರದಲ್ಲಿ ೫ ಎಂ.ವಿ.ಎ. ಸಾಮರ್ಥ್ಯದ ಒಂದು ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲಾಗುವುದು. ಈ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ೩೦ ಲಕ್ಷ ರೂ.ಈ ಸಾಲಿನ (೧೯೯೨-೯೩)ರ ಆಯವ್ಯಯದಲ್ಲಿ ೧೦ ಲಕ್ಷ ರೂ. ಒದಗಿಸಲಾಗಿದೆ. ನಿರ್ಮಾಣ ಕಾರ್ಯವನ್ನು ಮಾರ್ಚ್ ೯೪ ರ ಅಂತ್ಯದಲ್ಲಿ ಪೂರ್ಣಗೊಳಿಸಲು ಗುರಿ ಹೊಂದಿದೆ.

ಅಲ್ಲದೇ, ಗಂಗಾವತಿಯಲ್ಲಿರುವ ೧೧೦ ಕೆ.ವಿ. ಉಪ ವಿದ್ಯುತ್ ಕೇಂದ್ರದಲ್ಲಿ ಒಂದು ೧೦ ಎಂ.ವಿ.ಎ. ಸಾಮರ್ಥ್ಯದ ೧೧೦/೩೩ ಕೆ.ವಿ.ಪವರ್ ಟ್ರಾನ್ಸ್‌ಫಾರ್ಮರನ್ನು ಹೆಚ್ಚುವರಿಯಾಗಿ ಸ್ಥಾಪಿಸಲು ಉದ್ದೇಶಿಸಿದ್ದು, ಈ ಕಾರ್ಯವನ್ನೂ ಸಹ ಮಾರ್ಚ್ ೯೪ರ' ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಗುರಿ ಹೊಂದಿದೆ. ಸದರೀ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು ೧೨೦ ಲಕ್ಷ ರೂ.ಈ ಸಾಲಿನ (೧೯೯೨-೯೩) ಆಯವ್ಯಯದಲ್ಲಿ ೧೦ ಲಕ್ಷ ರೂ.ಒದಗಿಸಲಾಗಿದೆ.

(೬): ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೬ ಕ್ಕೆ ಇಳಿಸುವ ಬಗ್ಗೆ ಸರ್ಕಾರದ ನಿಲುವು.

ಶ್ರೀ. ಶಿವಾನಂದ ಹೆಚ್. ಕೌಜಲಗಿ:- (ಬೈಲಹೊಂಗಲ): ಮಾನ್ಯ ಅಧ್ಯಕ್ಷರೇ:- ಶ್ರೀ ವೀರೇಂದ್ರಪಾಟೀಲ್ ಮುಖ್ಯ ಮಂತ್ರಿಗಳಾಗಿದ್ದಾಗ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೬ ಕ್ಕೆ ಇಳಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದರು. ನಂತರ ಮತ್ತೆ ಒಂದು ವರ್ಷ ಈಗಿದ್ದ ಸ್ಥಿತಿಯನ್ನೇ ಮುಂದುವರಿಸಲಾಗಿದೆಯೆಂದು ತಿಳಿಸಲಾಯಿತು.

ಹೋದ ವಿಧಾನಸಭಾಧಿವೇಶನದಲ್ಲಿ ಈ ಬಗ್ಗೆ ಇನ್ನೂ, ನಿರ್ಣಯ ತೆಗೆದುಕೊಂಡಿರುವುದಿಲ್ಲ ಎಂದು ತಿಳಿಸಲಾಯಿತು. ಆದರೆ ಮೊನ್ನೆ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದವರು ಇದರ ಬಗ್ಗೆ ಯಾವುದೇ ಪ್ರಸ್ತಾವನೆಯನ್ನು ಮಾಡಿರುವುದಿಲ್ಲ. ಹೀಗಾಗಿ ನೌಕರರು ತ್ರಿಶಂಕು ಸ್ಥಿತಿಯಲ್ಲಿರುವರು. ಆದಕಾರಣ, ಸರ್ಕಾರದವರು ಈಗಿರುವ ನಿಯಮಗಳಂತೆ ನೌಕರರ ನಿವೃತ್ತ ವಯಸ್ಸನ್ನು ೫೮ ವರ್ಷಗಳವರೆಗೆ ಮುಂದುವರಿಸುವಿರೋ ಅಥವಾ ಕಡಿಮೆ ಮಾಡುವರೋ ಎಂಬುದನ್ನು ತಿಳಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬ್ಲೆಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):- ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಮಾನ್ಯ ರಾಜ್ಯಪಾಲರು ವಿಧಾನ ಮಂಡಲದ ಎರಡು ಸದನಗಳನ್ನುದ್ದೇಶಿಸಿ ದಿನಾಂಕ ೧೩-೮-೧೯೯೦ ರಂದು ಮಾಡಿದ ಭಾಷಣದಲ್ಲಿ ಸರ್ಕಾರಿ ನೌಕರರ ನಿವೃತ್ತ ವಯಸ್ಸನ್ನು ೫೮ ರಿಂದ ೫೫ ವರಗೆಇಳಿಸಬೇಕೆಂದು ಬಹಳಷ್ಟು ಮನವಿಗಳು, ನಿರುದ್ಯೋಗಿಯುವಕರುಗಳಿಂದ

ಬಂದಿವೆಯೆಂದು ಮತ್ತು ಸರ್ಕಾರವು ಈ ಬಗ್ಗೆ ಎಲ್ಲಾ ಅಂಶಗಳನ್ನು ಎಚ್ಚರಿಕೆಯಿಂದ ಗಮನಿಸುವುದಾಗಿ ಸದನಕ್ಕೆ ತಿಳಿಸಲಾಗಿತ್ತು.

ದಿನಾಂಕ ೪-೪-೧೯೯೦ ರಂದು ಅಂದಿನ ಮುಖ್ಯಮಂತ್ರಿಯವರು ಸದನದಲ್ಲಿ ಇದು ಒಂದು ಪ್ರಾಮುಖ್ಯವಾದ ಸರ್ಕಾರದ ನೀತಿಯಾಗಿದ್ದು, ಇದರ ಸಾಧಕ ಮತ್ತು ಭಾದಕಗಳ ಬಗ್ಗೆ ಅಂದರೆ ಎಷ್ಟು ಜನ ಸರ್ಕಾರಿ ನೌಕರರು ನಿವೃತ್ತಿಯಾಗಬಹುದು ಹಾಗೂ ಅವರಿಗೆ ಕೊಡಬೇಕಾಗಿರುವ ಹಣದ ಹೊರೆಯನ್ನು ಸರ್ಕಾರ ಹೊರುವುದಕ್ಕೆ ಸಾಧ್ಯವೇ ಮತ್ತು ಸರ್ಕಾರ ಈ ಬಗ್ಗೆ ಅಂತಿಮ ನಿರ್ಣಯವನ್ನು ಮಾರ್ಚ್ ೧೯೯೧ ರೊಳಗೆ ತೆಗೆದು ಕೊಳ್ಳುವುದಕ್ಕೆ ಆಗಿಲ್ಲವೆಂದು ಸಭೆಗೆ ಆಶ್ವಾಸನೆ ನೀಡಿದ್ದರು.

೧೯೯೧ರಲ್ಲಿ ಮಾನ್ಯ ರಾಜ್ಯಪಾಲರು ಎರಡು ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ರಾಜ್ಯದ ಆಡಳಿತದಲ್ಲಿ ಪಂಚಸೂತ್ರಗಳನ್ನು ಅಳವಡಿಸಲು ಪ್ರಸ್ತಾಪಿಸಿದ್ದು, ಅದಕ್ಕೆ ಅನುಗುಣವಾಗಿ ಕರ್ನಾಟಕ ಸಿವಿಲ್ ಸೇವಾ ಕಾಯ್ದೆ ೧೯೭೮ನ್ನು ೨-೪-೧೯೯೨ರಿಂದ ಜಾರಿಗೆ ತರಲಾಗಿದೆ. ಈ ಕಾಯ್ದೆಯನ್ವಯ ರಾಜ್ಯ ಸರ್ಕಾರದ ನೌಕರರ ಸೇವಾ ಷರತ್ತುಗಳನ್ನು ರಚಿಸಲು ಅವಕಾಶ ಕಲ್ಪಿಸಿದೆ. ಸಿಬ್ಬಂದಿ ಮತ್ತು ಆಡಳಿದ ಸುಧಾರಣೆ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಾಲ್ಕು ಜನ ಅಧಿಕಾರಿಗಳ ಒಂದು ಸಮಿತಿಯನ್ನು ಹಾಲಿ ಇರುವ ನಿಯಮಗಳನ್ನು ಸರಳಗೊಳಿಸಲು ರಚಿಸಿದೆ. ಆ ಸಮಿತಿಯು ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, ೧೯೯೨ ನ್ನು ಸರ್ಕಾರಕ್ಕೆ ಸಲ್ಲಿಸಿತ್ತು.

ಸದರಿ ಸಮಿತಿಯು ಸಲ್ಲಿಸಿದ್ದ ಕರಡು ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ ಕಾಯ್ದೆ ೧೯೭೮ ರ ಪ್ರಕಾರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ ೬ ಎಸ್ಆರ್‌ಸಿ ೯೨, ದಿನಾಂಕ ೧೯-೧೦-೧೯೯೨ ನ್ನು ಕರ್ನಾಟಕ ರಾಜ್ಯ ವಿಶೇಷ ಪತ್ರಿಕೆಯಲ್ಲಿ ದಿನಾಂಕ ೪-೧೧-೧೯೯೨ ರಂದು ಸಂಬಂಧಪಟ್ಟವರಿಂದ ಕರಡು ನಿಯಮಗಳಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ೩೦ ದಿನದ ಒಳಗಾಗಿ ಸಲ್ಲಿಸಲು ಕೋರಲಾಗಿತ್ತು. ಈ ಬಗ್ಗೆ ಆಕ್ಷೇಪಣೆ ಸಲಹೆಗಳನ್ನು ಸಲ್ಲಿಸಲು ದಿನಾಂಕ ೪-೧೨-೧೯೯೨ರಂದು ಕೊನೆಯ ದಿನವಾಗಿತ್ತು. ಪ್ರಕಟಿಸಲಾಗಿದ್ದ ಕರಡು ನಿಯಮಗಳಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು ೧೯೭೭ ಮತ್ತು ಇತರ ೧೦ನಿಯಮಾವಳಿಗಳನ್ನು ನಿರಶನಗೊಳಿಸಲು ಉದ್ದೇಶಿಸಲಾಗಿದೆ. ಈ ಕರಡು ನಿಯಮಗಳಲ್ಲಿ ಇನ್ನಿತರ ನಿಯಮಗಳ ಜೊತೆ ಪ್ರತಿಯೊಬ್ಬ ಸರ್ಕಾರಿ ನೌಕರನು ಆತನಿಗೆ ೫೮ ವರ್ಷ ವಯಸ್ಸು ಆದ ದಿನಾಂಕದಂದು ಅಥವಾ ೩೩ ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದಂದು ಇವುಗಳಲ್ಲಿ ಯಾವುದು ಮೊದಲೋ, ಆ ದಿನದಂದು ವಯೋ ನಿವೃತ್ತಿಯ ಮೇಲೆ ಸೇವೆಯಿಂದ ನಿವೃತ್ತನಾಗತಕ್ಕದ್ದು ಎಂದು ಅಳವಡಿಸಲಾಗಿದೆ.

ಈ ಕರಡು ನಿಯಮಗಳಿಗೆ ರಾಜ್ಯ ಸರ್ಕಾರಿ ನೌಕರರ ಸಂಘಗಳಿಂದ, ವಿವಿಧಸರ್ಕಾರಿ ನೌಕರರಿಂದ, ಸಾರ್ವಜನಿಕರಿಂದ ಆಕ್ಷೇಪಣೆ ಸಲಹೆಗಳು ಬಂದಿದೆ. ಈ ಆಕ್ಷೇಪಣೆಗಳಲ್ಲಿ ಈಗ ಉದ್ದೇಶಿಸಲಾಗಿರುವ ನಿವೃತ್ತಿಯ ವಯಸ್ಸು ಮತ್ತು ನೇಮಕಾತಿಗೆ ಕನಿಷ್ಟ ವಯೋಮಿತಿಗೆ ಸಂಬಂಧಿಸಿದ ನಿಯಮಗಳನ್ನು ಕೈಬಿಡಬೇಕೆಂದು ಕೋರಲಾಗಿದೆ.

ಸದರಿ ನಿಯಮಗಳಿಗೆ ಬಂದಿರುವ ಆಕ್ಷೇಪಣೆ ಮತ್ತು ಸಲಹೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಅವರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ ೬ ಎಸ್ಆರ್‌ಸಿ ೯೨, ದಿನಾಂಕ ೮-೧೧-೧೯೯೩ರಂದು ರಚಿಸಿದೆ. ಈ ಸಮಿತಿಯು ಈಗಾಗಲೇ ಸಭೆಸೇರಿದ್ದು, ಇದರ ಬಗ್ಗೆ ಚರ್ಚಿಸಿದೆ. ಸದರಿ ಸಮಿತಿಯು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ನಂತರ ಸರ್ಕಾರವು ಈ ಬಗ್ಗೆ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಲಿದೆ.